**ಓ.ಎಸ್. ನಂ. 131/2022** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 18.9.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಸ್.ಕೆ.ಜಿ ವಕೀಲರಿಂದಃ**

ಈಗ ನೋಡುತ್ತಿರುವ ದಾಖಲೆಯು ನಾನು ಮತ್ತು 2 ನೇ ವಾದಿಯು 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಮಾಡಿಕೊಟ್ಟಿರುವ ನೋಂದಣಿ ದಾಖಲೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ದಿನಾಂಕ 2.12.2020 ರ ಹಕ್ಕು ಬಿಡುಗಡೆ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿರುತ್ತದೆ. ನಾನು ಮತ್ತು 2 ನೇ ವಾದಿಯು ಎಂದಿಗೂ ನೊಂದಣಿ ಕಛೇರಿಗೆ 1 ನೇ ಪ್ರತಿವಾದಿ ಜೊತೆ ಹೋಗಿರುವುದಿಲ್ಲ. ನಾನು ಮತ್ತು 2 ನೇ ವಾದಿಯು ಹಕ್ಕು ಬಿಡುಗಡೆ ಮಾಡಿಕೊಟ್ಟಿದ್ದರೂ ಸಹ ಸದರಿ ವಿಚಾರ ಗೊತ್ತಾಗುತ್ತದೆ ಎಂದು ಈ ದಾವೆಯಲ್ಲಿ ಮರೆ ಮಾಚಿರುತ್ತೇವೆ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲೆಂದು ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ 3 ನೇ ಐಟಂ ಆಸ್ತಿಯನ್ನು 6 ನೇ ಪ್ರತಿವಾದಿಯು ಖರೀದಿ ಮಾಡಿರುವ ವಿಚಾರ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿದಾರರು ಈಗ 2 ತಿಂಗಳ ಹಿಂದೆ ನಾವು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 6 ನೇ ಪ್ರತಿವಾದಿಯು ಜಮೀನಿನ ಬಳಿ ಬಂದು ಗಲಾಟೆ ಮಾಡಿದಾಗ ಗೊತ್ತಾಗಿರುತ್ತದೆ ಎನ್ನುವರು. ಆ ಬಗ್ಗೆ ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. 6 ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ಹಾಗೂ ಖಾತೆಯಾಗಿರುವುದನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಕ್ರಯಪತ್ರವಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎನ್ನುವರು. 2 ನೇ ಪ್ರತಿವಾದಿ ಹಾಗೂ 6 ನೇ ಪ್ರತಿವಾದಿ ನಡುವೆ ದಾವ 3 ನೇ ಐಟಂ ಆಸ್ತಿಗೆ ಸಂಬಂಧಿಸಿದಂತೆ ಓ.ಎಸ್ 106/2015 ರಂತೆ ಇದೇ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಈ ಹಿಂದೆ ನನ್ನ ತಂದೆಯ ಮನೆಗೆ ಹೋಗುತ್ತಿದ್ದಾಗ ದಾವಆಸ್ತಿಗಳಿಗೆ ಸಂಬಂಧಪಟ್ಟಂತೆ ಏನು ವ್ಯವಹಾರ ನಡೆಯುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ದಾವಆಸ್ತಿಗಳಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಗಳಲ್ಲಿ ಒಂದು ತಂಬಾಕು ಬ್ಯಾರನ್ ಇದ್ದು ಅದು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ತಂಬಾಕು ಬ್ಯಾರನ್‌ನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. 2 ನೇ ಪ್ರತಿವಾದಿಯ ವಾಸದ ಮನೆಯ ಪಕ್ಕದಲ್ಲಿ ಸದರಿ ತಂಬಾಕು ಬ್ಯಾರನ್ ಇರುತ್ತದೆ. ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ಸದರಿ ತಂಬಾಕು ಬ್ಯಾರನನ್ನು ಉದ್ದೇಶಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಪಡೆದಿರುವ ಸಾಲ ತೀರಿಸಲು ಮತ್ತು ಅವರ ಕುಟುಂಬದ ಅವಶ್ಯಕತೆಗೆ ದಾವ 3 ನೇ ಐಟಂ ಆಸ್ತಿಯನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ವಿರುದ್ದ ನಿರ್ದಿಷ್ಟ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ

ದಾವೆಯ ಡಿಕ್ರಿಯ ಪ್ರಕಾರ 6 ನೇ ಪ್ರತಿವಾದಿ ಹೆಸರಿಗೆ ಕ್ರಯವಾಗಿದ್ದು, ಅವರು ಸದರಿ ಆಸ್ತಿಯ ಕಾನೂನುಬದ್ಧ ಖರೀದಿದಾರರು ಎಂದರೆ ಸರಿಯಲ್ಲ. ನನಗೆ ಮತ್ತು 2 ನೇ ವಾದಿಗೆ ದಾವಆಸ್ತಿಗಳಲ್ಲಿ ಬರಬೇಕಾದ ಆಸ್ತಿಯ ಬದಲು ಹಣ ಪಡೆದುಕೊಂಡು ಹಕ್ಕು ಖುಲಾಸೆ ಪತ್ರವನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಾವ 3 ನೇ ಐಟಂ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು ನನ್ನ ತಂದೆಯು ಬದುಕಿದ್ದಾಗಲೇ 2 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಟ್ಟಿರುವುದರಿಂದ ಸದರಿ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಕಾನೂನುಬದ್ಧ ಖರೀದಿದಾರರಾಗಿದ್ದು ವಾದಿ ಮತ್ತು 1, 2 ನೇ ಪ್ರತಿವಾದಿ ಸೇರಿ ಅವರಿಗೆ ತೊಂದರೆ ನೀಡಲು ಈ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.